3) ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಬಗ್ಗೆ

ಶ್ರೀ ಕೆ. ಲಕ್ಕಪ್ಪ: ಇತ್ತೀಚಿಗೆ ಸುಮಾರು 11 ಸಾವಿರ ಪ್ರಾಥಮಿಕ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ಆ ಸಂದರ್ಭದಲ್ಲಿ ಸರಕಾರದ ನಿರ್ದೇಶನಗಳನ್ನು ಪಾಲಿಸಿಲ್ಲ. ಹಲವಾರು ಜಿಲ್ಲೆಗಳಲ್ಲಿ ಆಯ್ಕೆಯಾದ ಶಿಕ್ಷಕರ ಪಟ್ಟಿಯಲ್ಲಿ ಕೇವಲ ಅವರ ವಯಸ್ಸು ಹಾಗೂ ಜಾತಿಯನ್ನು ಮಾತ್ರ ನಮೂಡಿಸಲಾಗಿದ್ದು ಅವರು ಪಡೆದುಕೊಂಡಿರತಕ್ಕ ಅಂಕಗಳನ್ನು ನಮೂದಿಸಿಲ್ಲ. ಈ ನೇಮಕಾತಿಗಳಲ್ಲಿ ಹಲವಾರು ನ್ಯೂನತೆಗಳು ಕಂಡು ಬಂದಿರುತ್ತವೆ. ಅರ್ಹ ಅಭ್ಯರ್ಥಿಗಳಿಗೆ ಬಹಳ ಅನ್ಯಾಯವಾಗಿದೆ. ಆದ್ದರಿಂದ ಈ ಬಗ್ಗೆ ವಿಚಾರಣೆ ನಡೆಸುವುದು ಅವಶ್ಯಕ. ಇನ್ನು ಮುಂದೆ ಭರ್ತಿ ಮಾಡುವಾಗ ಈ ಹುದ್ದೆಗಳಿಗೆ ನೇಮಕಾತಿ ಸಮಿತಿಗಳನ್ನು ಮಾಡಿ ಅದರ ಮೂಲಕ ನೇಮಕಗಳನ್ನು ಮಾಡಕೊಳ್ಳಬೇಕೆಂದು ಸನ್ಮಾನ್ಯ ವಿದ್ಯಾ ಸಚಿವರು ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: (ಶಿಕ್ಷಣ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದಿನಾಂಕ 1-3-90 ರಂದು ಇದ್ದಂತೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನಿಯಮಾವಳಿ ಆದೇಶ ಸಂಖ್ಯೆ: ಇಡಿ 25 ಪಿಎಂಎಸ್ 90 ದಿನಾಂಕ 20-12-90ರ ಪ್ರಕಾರ ಕ್ರಮಕೈಗೊಂಡಿದೆ. ವಿಶೇಷ ನಿಯಮಾವಳಿಗಳ ಪ್ರಕಾರ ಆಯಾಯ ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರದಲ್ಲಿ ದಿನಾಂಕ 11-1-91ರವರೆಗೆ ನೊಂದಾಯಿಸಿದ ಎಸ್.ಎಸ್.ಎಲ್.ಸಿ: ಟಿ.ಸಿ.ಹೆಚ್. ವಿದ್ಯಾರ್ಹತೆಯನ್ನು ಹೊಂದಿದ ಅಭ್ಯರ್ಥಿಗಳ ಪಟ್ಟಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಪಡೆದುಕೊಂಡಿರುತ್ತಾರೆ. ಅಭ್ಯರ್ಥಿಗಳು ತಮ್ಮ ಎಸ್ಎಸ್ಎಲ್ಸಿ, ಟಿಸಿಹೆಚ್ ಪರೀಕ್ಷೆಗಳಲ್ಲಿ ಪಡೆದ ಸರಾಸರಿ ಶೇಕಡಾವಾರು ಅಂಕಗಳ ಆಧಾರದ ಮೇಲೆ ಆಯ್ಕೆಯನ್ನು ಮಾಡಲಾಗಿದೆ. ಜಿಲ್ಲೆಯಲ್ಲಿರುವ ಹುದ್ದೆಗಳನ್ನು ಮಿಸಲಾತಿ ನಿಯಮಗಳಿಗನುಸಾರವಾಗಿ ಎಸಿ, ಎಸ್ಟಿ ಗ್ರೂಪ್ಎ,ಬಿ,ಸಿ,ಡಿ,ಇ ಎಂದು ಸಹ ವರ್ಗೀಕರಣ ಮಾಡಲಾಗಿದೆ. ಈ ಆಧಾರದ ಮೇಲೆ ಆಯ್ಕೆ ಮಾಡಲಾದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ನಿಯಮಗಳ ಪ್ರಕಾರ ಅಭ್ಯರ್ಥಿಗಳು ಪಡೆದಿರತಕ್ಕ ಅಂಕಗಳನ್ನು ಪ್ರಕಟಿಸುವ ಅಗತ್ಯವಿಲ್ಲ.

ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ಕೊಡುವ ಮುನ್ನ ಅವರುಗಳಿಂದ ಮೂಲ ಪ್ರಮಾಣ ಪತ್ರಗಳನ್ನು ಪಡೆದು ಪರಿಶೀಲಿಸಿ ನಿಯಮಗಳ ಪ್ರಕಾರ ಎಲ್ಲ ರೀತಿಯಿಂದಲೂ ಸರಿಯಾಗಿದೆ ಎಂದು ಕಂಡು ಬಂದ ನಂತರವೇ ನೇಮಕಾತಿ ಆದೇಶಗಳನ್ನು ವೈಯುಕ್ತಿಕವಾಗಿ ನೀಡಲಾಗುವುದು. ಬೆಳಗಾಂ ಜಿಲ್ಲೆಯಲ್ಲಿ ಕೆಲವು ನ್ಯೂನತೆಗಳು ಉಂಟಾಗಿದೆಯೆಂದು ವರದಿ ಬಂದ ಕಾರಣ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಯುಕ್ತರ ಕಛೇರಿಯಲ್ಲಿರುವ ಸಹ ನಿರ್ದೇಶಕರು (ಆಡಳಿತ) ಇವರನ್ನು ವಿಚಾರಣೆ ಮಾಡಿ ವರದಿ ಸಲ್ಲಿಸಬೇಕೆಂದು ತಿಳಿಸಿದೆ. ಅವರಿಂದ ವರದಿ ಬಂದ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. ನಿರ್ದಿಷ್ಟ ಆರೋಪಗಳು ಇತರೇ ಜಿಲ್ಲೆಗಳಲ್ಲಿ ಸಹ ಕಂಡು ಬಂದಲ್ಲಿ, ಅವುಗಳನ್ನು ಪರಿಶೀಲಿಸಿ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು.

ಪ್ರಸಕ್ತ ನೇಮಕಾತಿ ನಿಯಮಗಳಲ್ಲಿ ನೇಮಕಾತಿ ರಚಿಸಲು ಅವಕಾಶವಿಲ್ಲ. ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸಿ ಅಗತ್ಯವಿದ್ದಲ್ಲಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಲಾಗುವುದು.